

## ಹರೆಯದ ಓರೆ ನೋಟ

ಹುಚ್ಚು ಕೋಡಿ ಮನಸು/ ಅದು ಹದಿನಾರರ ವಯಸು/ ಮಾತು ಮಾತಿಗೇಕೋ ನಗು/ ಮರುಗಳಿಗೆಯೇ ಮೌನ, ಕನ್ನಡಿ ಮುಂದಷ್ಟು ಹೊತ್ತು/ ಬರೆಯದಿರುವ ಕವನ... ಎಚ್.ಎಸ್. ವೆಂಕಟೇಶ್‌ಮೂರ್ತಿ ಅವರು ರಚಿಸಿದ ಈ ಕವಿತೆ ಹದಿವಯಸ್ಸಿನ ಹುಡುಗಿಯೊಬ್ಬಳ ಮನೋವ್ಯಾಪಾರವನ್ನು ಹೇಳುತ್ತದೆ. ಆ ಮಕ್ಕಳ ಸೌಂದರ್ಯ ಪ್ರಜ್ಞೆ, ತಮ್ಮ ಚೆಲುವಿನ ಬಗ್ಗೆ ಇರುವ ಹೆಮ್ಮೆ, ಸ್ವಾಭಿಮಾನದ ಹಮ್ಮು ತಮ್ಮ ಗುರಿಯ ದಿಟ್ಟ ನೋಟ. ದಿಕ್ಕುಗೆಡಿಸುವ ಚಂಚಲತೆ. ಅತ್ತಲಿತ್ತ ಹರಿಯದಂತೆ ಮನಸ್ಸು ಹಿಡಿದಿಡುವ ತಪಸ್ಸು, ಪೋಷಕರ ಮೇಲೆ ಸಿಟ್ಟು... ಹೀಗೆ ಹದಿನಾರರ ವಯಸ್ಸಿನಲ್ಲಿ ಮಕ್ಕಳು ನಾನಾ ರೂಪದಲ್ಲಿ ಅವತರಿಸುತ್ತಾರೆ. ಅವರ ಆ ಕಾಲ ಅತ್ಯಂತ ಸೂಕ್ಷ್ಮವಾಗಿದ್ದು ಆಗ ಅವರಿಗೆ ಒಲವಿನ ಓಲೈಕೆ, ಅಕ್ಕರೆ ಆರೈಕೆ ಇನ್ನೂ ಹೆಚ್ಚೇ ಬೇಕು ಎಂದು ಹೇಳುತ್ತದೆ ಪ್ರಸ್ತುತ ವರ್ತಮಾನ.

ವಯಸ್ಸಿನ ಕಾರಣಕ್ಕೆ ಸಂಬಂಧವನ್ನು ಅತ್ಯಾಚಾರ ಎಂದು ತೀರ್ಮಾನಿಸುವುದು ತಪ್ಪು.

### ಪೋಷಕರ ಪಾಲೂ ಇದೆ

ಶಿಕ್ಷಕರು ಮತ್ತು ಹತ್ತಿರದ ಸಂಬಂಧಿಗಳ ದೌರ್ಜನ್ಯ ತಡೆಗೂ ಲೈಂಗಿಕ ಅರಿವು ಅಗತ್ಯ. ವಿದ್ಯಾರ್ಥಿಗಳಿಗೆ ಅವರದ್ದೇ ಬಯಕೆ ಇರುತ್ತದೆ. ಬಲವಂತದ ಮೂಲಕ ಮಾಡುವ ಯಾವುದೇ ಸ್ವರೂಪದ ದೌರ್ಜನ್ಯ ಅಪರಾಧ. ನಮ್ಮ ಮಕ್ಕಳಿಗೆ ಸರಿಯಾದ ತಿಳಿವಳಿಕೆ ಇದ್ದರೆ ಯುವಕರು ಅಥವಾ ಹಿರಿಯರು ಏನು ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ತಿಳಿವಳಿಕೆಯೇ ಇಲ್ಲದೆ ಇದ್ದರೆ ಹೇಗೆ? ಏನಾಗುತ್ತದೆ ಎನ್ನುವುದು ಗೊತ್ತಾಗದೆ ದೌರ್ಜನ್ಯಕ್ಕೆ ಕೆಲವೊಮ್ಮೆ ತುತ್ತಾಗುತ್ತಾರೆ. ಮಕ್ಕಳ ಬದುಕಿನ ಬಗ್ಗೆ ಪೋಷಕರಿಗೂ ಅರಿವಿರಬೇಕು. ಮಕ್ಕಳು ಇಂತಹ ವಿಚಾರವನ್ನು ಪೋಷಕರ ಜೊತೆ ಮುಕ್ತವಾಗಿ ಮಾತನಾಡುವ ವಾತಾವರಣವನ್ನೇ ನಾವು ನಿರ್ಮಿಸಿಲ್ಲ. ಹುಡುಗ ಹುಡುಗಿ ಪರಸ್ಪರ ಮುಟ್ಟುವುದು, ಕುಳಿತು ಮಾತನಾಡುವುದು, ಒಟ್ಟಿಗೆ ಆಟ ಆಡುವುದನ್ನೇ ತಪ್ಪಿತಸ್ಥ ಭಾವದಲ್ಲಿ ನೋಡುತ್ತಿದ್ದೇವೆ. ಗಂಡು–ಹೆಣ್ಣು ಸೇರುವುದೇ ಅಪರಾಧ ಎಂದು ನೋಡಿದರೆ ಹೇಗೆ? ಮನೆಯಲ್ಲೇ ಆಗಲಿ ಸಮಾಜದಲ್ಲೇ ಆಗಲಿ ಎಲ್ಲ ವಿಷಯದ ಬಗ್ಗೆ ಮಕ್ಕಳು ತಮ್ಮ ತಂದೆ–ತಾಯಿ ಜೊತೆ ಮಾತನಾಡಬೇಕು. ತಮ್ಮ ಮಕ್ಕಳ ಮನದಲ್ಲಿ ಪ್ರೀತಿ ಪ್ರೇಮದ ಮೊಳಕೆ ಇದ್ದರೂ ಅದಕ್ಕೆ ಸೂಕ್ತ ಮಾರ್ಗದರ್ಶನ ನೀಡಬೇಕು. ಆ ವಯಸ್ಸಿನ ಮಕ್ಕಳಿಗೆ ಮುಕ್ತ ಸ್ವಾತಂತ್ರ್ಯ ನೀಡಿದರೆ ಅವರ ಸಮಸ್ಯೆಗಳನ್ನು ಸಹಕಾರಾತ್ಮಕವಾಗಿ ಬಗೆಹರಿಸಲು ಸಾಧ್ಯವಾಗುತ್ತದೆ. ಈ ವಿಷಯ ಮಾತನಾಡಬಾರದು. ಅದರಲ್ಲೂ ಪೋಷಕರ ಜೊತೆ ನಿಷಿದ್ಧ ಎನ್ನುವ ನಿಬಂಧನೆಗಳನ್ನು ಮೊದಲು ನಿರ್ಮೂಲನೆ ಮಾಡಬೇಕು. ಈ ನಿಯಂತ್ರಣಗಳೇ ಮಕ್ಕಳು ತಪ್ಪು ಮಾಡಲು ಅವಕಾಶ ಮಾಡಿಕೊಡುತ್ತಿವೆ. ಕುಟುಂಬದಲ್ಲಿ ಮಕ್ಕಳು ಮುಕ್ತವಾಗಿ ಮಾತನಾಡಬೇಕು. ಹದಿಹರೆಯದಲ್ಲಿ ಅನೇಕ ದೈಹಿಕ ಬದಲಾವಣೆ ಆದಂತೆ ಬಯಕೆಗಳೂ ಇರುತ್ತವೆ. ಅದಕ್ಕೆ ಲೈಂಗಿಕ ಶಿಕ್ಷಣ ಅವಶ್ಯ. ಮಕ್ಕಳ ಆಕರ್ಷಣೆ ಸಹಜವಾದದ್ದೇ ಹೊರತು ಅದರಲ್ಲಿ ವಿಶೇಷವಾದದ್ದೇನೂ ಅಲ್ಲ.

ಈಗಿರುವ ಕಾಯ್ದೆಯ ಪ್ರಕಾರ ಒಪ್ಪಂದದ ಲೈಂಗಿಕ ಸಂಬಂಧವೂ ಅಪರಾಧ. ಇಂತಹ ಅನೇಕ ಪ್ರಕರಣಗಳನ್ನು ಕೋರ್ಟ್ ರದ್ದು ಮಾಡಿದೆ. ಇದಕ್ಕೆ ಕರ್ನಾಟಕ, ಪಶ್ಚಿಮ ಬಂಗಾಳ ಸೇರಿದಂತೆ ಅನೇಕ ಕಡೆ ನಿದರ್ಶನಗಳು ಸಿಗುತ್ತವೆ. ಇಂತಹ ಸಂದರ್ಭದಲ್ಲಿ ಬಲಿಪಶುಗಳಾದ ಸಂತ್ರಸ್ತರ ದೃಷ್ಟಿಯಿಂದ ಈ ಬಗ್ಗೆ ಯೋಚಿಸಬೇಕಿದೆ. ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ಸಿಕ್ಕರೆ ಅವರು ತಪ್ಪು ಮಾಡುವುದು ತಪ್ಪುತ್ತದೆ. ಹದಿಹರೆಯದ ಪ್ರೇಮವನ್ನೆಲ್ಲ ಅಪರಾಧೀಕರಣ ಮಾಡುತ್ತಾ ಹೋದರೆ ಎಲ್ಲರನ್ನೂ ಜೈಲಿಗೆ ಹಾಕಬೇಕಾಗುತ್ತದೆ.

### ಲೈಂಗಿಕತೆಯ ಅರಿವೂ ನಿರ್ಧಾರದ ಸಾಮರ್ಥ್ಯವೂ...



ಹದಿಹರೆಯದವರಲ್ಲಿ, ವಿಶೇಷವಾಗಿ 16ರ ವಯೋಮಾನದವರಲ್ಲಿ ಸಹಮತದ ಲೈಂಗಿಕತೆಯನ್ನು ದೌರ್ಜನ್ಯ ಅಥವಾ ಅಪರಾಧವೆಂದು ಪರಿಗಣಿಸಬಾರದು ಎಂದು ಸುಪ್ರೀಂ ಕೋರ್ಟ್‌ನಲ್ಲಿ ವಕೀಲೆ ಇಂದಿರಾ ಜೈಸಿಂಗ್ ಅವರು ಮಂಡಿಸಿರುವ ವಾದವು ಸಂದರ್ಭೋಚಿತವಾಗಿದೆ. ಇದಾಗ್ಯೂ ಪುನರ್ ಪರಿಶೀಲನೆ ಮಾಡಬೇಕಾದ ಅಗತ್ಯವೂ ಇದೆ ಎನಿಸುತ್ತಿದೆ.

ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ, ಲೈಂಗಿಕ ಶಿಕ್ಷಣವನ್ನು ಪೋಷಕರು ಹಾಗೂ ಹಲವು ಶಿಕ್ಷಣ ಸಂಸ್ಥೆಗಳು ನಿರ್ಲಕ್ಷಿಸುತ್ತಾ ಬಂದಿವೆ, ಇಲ್ಲವೇ ಈಗಲೂ ಲೈಂಗಿಕತೆ ಕುರಿತ ಹಿಂಜರಿಕೆಯೊಂದು ಇದ್ದೇ ಇದೆ. ಜೊತೆಗೆ, ಬಹುಪಾಲು ಯುವಜನತೆ ತಮ್ಮ 16ರ ವಯಸ್ಸಿನಲ್ಲಿ ತಮ್ಮ ಪೋಷಕರ ಮೇಲೆ ಆರ್ಥಿಕವಾಗಿ ಅವಲಂಬಿತರಾಗಿರುತ್ತಾರೆ. ಈ ಅವಲಂಬನೆಯ ಸ್ವರೂಪ ಹಲವು ಬಗೆಯದ್ದಾಗಿದೆ. ಹೀಗಾಗಿ ವಿದೇಶಗಳಲ್ಲಿದ್ದಂತೆ ಇಲ್ಲಿಯೂ ಲೈಂಗಿಕತೆಗೆ ಕಾನೂನುಬದ್ಧ ವಯಸ್ಸನ್ನು 16ಕ್ಕೆ ಇಳಿಸುವುದು ಹಲವು ಸಾಮಾಜಿಕ ಸಮಸ್ಯೆಗಳಿಗೆ ಎಡೆಮಾಡಿಕೊಡುವ ಸಾಧ್ಯತೆಗಳಿವೆ. ಕಾನೂನಾತ್ಮಕವಾಗಿ ನೋಡಿದರೆ, ಲೈಂಗಿಕತೆಯ ವಿಷಯದಲ್ಲಿ ವಯೋಮಿತಿಯ ಇಳಿಕೆ ಲೈಂಗಿಕ ಅಪರಾಧಗಳ ಪ್ರಮಾಣವನ್ನು ಹೆಚ್ಚಿಸುವ ಸಾಧ್ಯತೆ ಇರುತ್ತದೆ. ಸಾಮಾಜಿಕ ಶಿಸ್ತಿಲ್ಲದ ಸ್ವೇಚ್ಛೆಯಿಂದಾಗಿ ದುರ್ಬಳಕೆಯ ಸಾಧ್ಯತೆಯೂ ಹೆಚ್ಚಾಗುತ್ತದೆ. ಈ ವೇಗದ ಪ್ರಪಂಚದಲ್ಲಿ ಮಾಹಿತಿಗಳೇನೋ ಸುಲಭಕ್ಕೆ ದಕ್ಕುತ್ತಿವೆ. ಪ್ರಶ್ನೆ ಏನೆಂದರೆ, ಈ ಮಾಹಿತಿಗಳನ್ನು ಹರೆಯದವರು ಹೊಂದಿರುವುದು, ನಿರ್ಧಾರಗಳನ್ನು ತೆಗೆದುಕೊಳ್ಳುವ ಅವರ ಅರಿವಿನ ಸಾಮರ್ಥ್ಯಕ್ಕೆ ಸಮವಾಗಿರಲು ಸಾಧ್ಯವೇ? ಎಂಬುದು.

**–ಶ್ರಾವ್ಯ ಕೋಟ, ಕ್ರೈಸ್ಟ್ ಕಾಲೇಜು, ಬೆಂಗಳೂರು**